



ಅರುಣ ಪಿ. ಭಟ್ಟ


## ವಾರಭವಿಷ್ಯ: 12.06.2025ರಿಂದ 18.06.2025ರವರೆಗೆ




ಉದ್ಯಮದಲ್ಲಿ ಲಾಭವಿದೆ. ಹೊಸ ಉತ್ಸಾಹ ನಿಮ್ಮಲ್ಲಿ ಕಾಣಿಸಿಕೊಳ್ಳಲಿದೆ. ವಾರದ ಮಧ್ಯಭಾಗದಲ್ಲಿ ಜೀವನ ಮಟ್ಟದ ಸುಧಾರಣೆ ಬಗ್ಗೆ ಗಮನ ನೀಡಲಿದ್ದೀರಿ. ಈ ಅವಧಿಯಲ್ಲಿ ನಿಮಗೆ ನಾನಾ ಸವಾಲುಗಳು ಎದುರಾಗಲಿವೆ. ನಿಮ್ಮ ಸಂತೋಷದ ಕ್ಷಣಗಳಲ್ಲಿ ಇವು ಅಡೆತಡೆಗಳಂತೆ ಅನಿಸುತ್ತವೆ. ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲಿದ್ದೀರಿ. ಶುಭದಿನ: 18. ಹನುಮಾನ್ ಚಾಲೀಸ್ ಪಠಿಸಿರಿ.




ಉದ್ಯೋಗಕ್ಕೆ ಉತ್ತಮವಾದ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿಯನ್ನು ಮೆಚ್ಚಿಸುವ ಸಲುವಾಗಿ ಉಡುಗೊರೆಗಳನ್ನು ನೀಡಲಿದ್ದೀರಿ. ನಂಬಿದ ವ್ಯಕ್ತಿಗಳು ವಿವಿಧ ವಿಚಾರಗಳಲ್ಲಿ ನಿಮಗೆ ಸುಳ್ಳು ಹೇಳಿದ್ದಾರೆ ಎಂಬ ಸತ್ಯ ಸಂಗತಿ ನಿಮಗೆ ತಿಳಿದು ಬೇಸರವಾಗುತ್ತದೆ. ನಿಮ್ಮ ಮನಸಿನಲ್ಲಿ ಇರುವ ವಿಚಾರಗಳನ್ನು ನೇರವಾಗಿ ಹೇಳಿಕೊಳ್ಳಲಿದ್ದೀರಿ. ಶುಭದಿನ: 17. ಗಣೇಶ ಪಂಚರತ್ನ ಪಠಿಸಿರಿ.





ವೃತ್ತಿ ಬದುಕಿನಲ್ಲಿ ಬೆಳವಣಿಗೆಗೆ ಅದ್ಭುತ ಅವಕಾಶಗಳಿವೆ. ನಿಮ್ಮ ಪರಿಶ್ರಮಕ್ಕೆ ವೇಗದಲ್ಲಿ ಪ್ರತಿಫಲ ದೊರೆಯಲಿದೆ. ಇನ್ನು ಹಣಕಾಸು ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವ ಅವಕಾಶ ನಿಚ್ಚಳವಾಗಿ ಗೋಚರಿಸುತ್ತದೆ. ಈ ಹಿಂದಿಗಿಂತ ಖರ್ಚಿನ ಪ್ರಮಾಣ ಹೆಚ್ಚಿರುತ್ತದೆ. ಇದರಿಂದ ಮನಸಿಗೆ ಸ್ವಲ್ಪ ಬೇಸರವಾಗುತ್ತದೆ. ಆಹಾರದಲ್ಲಿ ಶಿಸ್ತುಪಾಲನೆ ಮಾಡಿಕೊಳ್ಳುವ ಅಗತ್ಯವಿದೆ. ಶುಭದಿನ: 14. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.





ಉದ್ಯೋಗಸ್ಥರಿಗೆ ವಾರದ ಶುರುವಿನಲ್ಲಿ ಅನುಕೂಲವಿದೆ. ಬಡ್ತಿ ವೇತನ ಹೆಚ್ಚಳ ಆಗುವ ಸಾಧ್ಯತೆ ಇದೆ. ವೈಯಕ್ತಿಕ ಸಂಬಂಧದಲ್ಲಿ ಕಹಿ ಅನುಭವ ಬೇಸರವಾಗಲಿದೆ. ಇಂಥ ಸನ್ನಿವೇಶದಲ್ಲಿ ವಾಗ್ವಾದ ಮಾಡದೆ ವಾಸ್ತವವನ್ನು ವಿವರಿಸಿ. ಆರೋಗ್ಯಕ್ಕೆ ಸಂಬಂಧಿಸಿದಂತೆ ಅನುಕೂಲಕರ ಸಮಯ ಇದು. ಹಣಕಾಸು ವಿಚಾರದಲ್ಲಿ ವಿಶೇಷವಾದ ಪ್ರಗತಿ ಕಾಣಿಸುವುದಿಲ್ಲ. ಶುಭದಿನ: 15. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉದ್ಯೋಗ ಸ್ಥಳದಲ್ಲಿ ಪ್ರಗತಿಗಾಗಿ ಭಾರೀ ಶ್ರಮ ಹಾಕಲಿದ್ದೀರಿ. ಒಂದಲ್ಲ ಒಂದು ಕೆಲಸವನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಒತ್ತಡ ಇದ್ದೇ ಇರುತ್ತದೆ. ಈ ಕೆಲಸಗಳನ್ನು ಪೂರ್ತಿ ಮಾಡಿದರೂ ಗೌರವ ಪ್ರಾಧಾನ್ಯ ಏನೂ ದೊರೆಯುವುದಿಲ್ಲ. ಕೆಲವು ಕಾನೂನು ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಆರೋಗ್ಯದ ವಿಚಾರಕ್ಕೆ ಇದು ಉತ್ತಮ ಸಮಯ ಅಲ್ಲ. ಶುಭದಿನ 18. ಕಾಲಭೈರವನ ಸೇವೆ ಮಾಡಿರಿ.





ನಿಮ್ಮ ಶ್ರಮಕ್ಕೆ ಅದ್ಭುತವಾದ ಅನುಕೂಲಗಳು ದೊರೆಯಲಿವೆ. ಪೋಷಕರ ಜೊತೆಗೆ ಹೆಚ್ಚು ಸಮಯ ಕಳೆಯಲು ಸಾಧ್ಯವಾಗದೆ ಕೆಲವು ಸಮಸ್ಯೆಗಳು ತಲೆದೋರಲಿವೆ. ಹೊಸ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಇನ್ನೂ ಹೆಚ್ಚಿನ ಶ್ರಮ ಹಾಕಬೇಕು. ವಾರದ ದ್ವಿತೀಯಾರ್ಧದಲ್ಲಿ ವ್ಯಾಪಾರ ವ್ಯವಹಾರದಲ್ಲಿ ಉತ್ತಮ ಲಾಭ ಇದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿ ಇದೆ. ಶುಭದಿನ: 15. ಸೌಂದರ್ಯ ಲಹರಿ ಪಠಿಸಿರಿ.




ನೀವು ಹಾಕಿದ ಶ್ರಮಕ್ಕೆ ಯಶಸ್ಸು ಸಿಗಲಿದೆ. ವೃತ್ತಿ ಜೀವನದಲ್ಲಿ ನಿರೀಕ್ಷಿತ ಯಶಸ್ಸು ದೊರೆಯಲಿದೆ. ನಿಮ್ಮ ಕನಸನ್ನು ಈಡೇರಿಸಿಕೊಳ್ಳಲಿದ್ದೀರಿ. ಇದೇ ಮೊದಲಿಗೆ ಎಂಬಂತೆ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಹೆಚ್ಚಿನ ಪರಿಶ್ರಮ ಹಾಕಬೇಕಾಗುತ್ತದೆ. ಯಶಸ್ಸು ದೊರೆಯುವ ಸಾಧ್ಯತೆ ಹೆಚ್ಚಿದೆ. ಕೆಲವು ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ವಿಪರೀತ ಶ್ರಮ ಹಾಕಬೇಕಾಗುತ್ತದೆ. ಶುಭದಿನ: 13. ಲಿಂಗಾಷ್ಟಕ ಪಠಿಸಿರಿ.





ಹೆಚ್ಚುವರಿ ಆದಾಯ ನಿರೀಕ್ಷಿತ ಪ್ರಮಾಣದಲ್ಲಿ ಆಗದೆ ಬೇಸರಕ್ಕೆ ಮಾಡಿಕೊಳ್ಳುತ್ತೀರಿ. ಈ ವಿಚಾರದಲ್ಲಿ ನಿಮ್ಮ ವಿವೇಚನೆಯನ್ನು ಸರಿಯಾದ ರೀತಿಯಲ್ಲಿ ಬಳಸಿ. ಒತ್ತಡದ ಸನ್ನಿವೇಶವನ್ನು ಎದುರಿಸುತ್ತೀರಿ. ವಾರದ ಮಧ್ಯ ಭಾಗಕ್ಕೆ ಬರುತ್ತಾ ಲಾಭದ ಪ್ರಮಾಣದಲ್ಲಿ ಸ್ವಲ್ಪಮಟ್ಟಿಗೆ ಏರಿಕೆಯಾಗುತ್ತದೆ. ಹಣಕಾಸು ವಿಚಾರದಲ್ಲಿ ಮತ್ತೆ ಹಳೆ ಲಯಕ್ಕೆ ಮರಳುತ್ತೀರಿ. ಶುಭದಿನ: 17. ಚಂಡಿ ಪಾರಾಯಣ ಮಾಡಿರಿ.





ಶೈಕ್ಷಣಿಕ ರಂಗದಲ್ಲಿ ಅದ್ಭುತವಾದ ಪ್ರಗತಿ ಇದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಯಶಸ್ಸು ನಿಮ್ಮದಾಗಲಿದೆ. ಸಂಗಾತಿ ಜೊತೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಹಣಕಾಸು ವಿಚಾರದಲ್ಲಿ ನಿರೀಕ್ಷಿತ ಪ್ರಗತಿ ಆಗಲಿದೆ. ಕೆಲವರಿಗೆ ಖರ್ಚಿನಲ್ಲಿ ಅನಿರೀಕ್ಷಿತ ಹೆಚ್ಚಳ ಆಗಬಹುದು. ನಿಮ್ಮನ್ನು ಮಣಿಸಲು ವಿರೋಧಿ ಪಾಳಯದಿಂದ ನಾನಾ ಬಗೆಯ ಪ್ರಯತ್ನಗಳು ಆಗುತ್ತವೆ. ಶುಭದಿನ: 16. ದತ್ತ ಗುರುಚರಿತ್ರೆ ಪಠಿಸಿರಿ.




ಉದ್ಯೋಗದಲ್ಲಿ ಯಶಸ್ಸು ದೊರೆಯುವ ಉತ್ತಮ ಅವಕಾಶಗಳಿವೆ. ನೀವು ಸಂಸ್ಥೆಯೊಂದರ ಜೊತೆ ಒಪ್ಪಂದಕ್ಕೆ ಬರುವ ಸಾಧ್ಯತೆಗಳಿವೆ. ಇನ್ನು ವ್ಯಾಪಾರ ಉದ್ಯಮವನ್ನು ವಿಸ್ತರಿಸಲು ಅವಕಾಶಗಳು ದೊರೆಯಬಹುದು. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮ ಪ್ರಗತಿ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಳ್ಳಲು ಸೂಕ್ತ ಸಮಯ ಇದು. ಶುಭದಿನ: 17. ನವಗ್ರಹ ಆರಾಧನೆ ಮಾಡಿರಿ.




ವಾರದ ಶುರುವಿನಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ವೃತ್ತಿಯಲ್ಲಿ ಉತ್ತಮ ಪ್ರಗತಿ. ಪದೋನ್ನತಿ ದೊರೆಯಬಹುದು. ಇದರಿಂದ ನಿಮ್ಮ ಉತ್ಸಾಹ ಹೆಚ್ಚಾಗಲಿದೆ. ನಿಂತುಹೋಗಿದ್ದ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲಿದ್ದೀರಿ. ಕೌಟುಂಬಿಕ ಸಮಸ್ಯೆಗಳು ಹೆಚ್ಚಾಗಬಹುದು. ಜೀವನಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಲಿದ್ದೀರಿ. ಉದ್ಯೋಗಸ್ಥರಿಗೆ ನಾನಾ ಬಗೆಯಲ್ಲಿ ಅನುಕೂಲಗಳಿವೆ. ಶುಭದಿನ: 14. ವಿಷ್ಣು ಸಹಸ್ರನಾಮ ಮಾಡಿರಿ.




ವಾರದ ಶುರುವಿನಲ್ಲಿ ಭೂಮಿ ಖರೀದಿ ಕಾರ್ಯದಲ್ಲಿ ತೊಡಗುವ ಸಾಧ್ಯತೆ ಇದೆ. ಉದ್ಯೋಗ ವಿಚಾರವಾಗಿ ದೂರಪ್ರಯಾಣ ಮಾಡಬೇಕಾಗುತ್ತದೆ. ಈ ವಾರದಲ್ಲಿ ಅರ್ಥಪೂರ್ಣವಾದ ಪ್ರಯತ್ನವೊಂದನ್ನು ಮಾಡಲಿದ್ದೀರಿ. ಸಂಗಾತಿ ಜೊತೆ ಮನಸ್ತಾಪ ಏರ್ಪಡಬಹುದು. ವಾರದ ದ್ವಿತೀಯಾರ್ಧದಲ್ಲಿ ಉದ್ಯೋಗದಲ್ಲಿ ಅದ್ಭುತವಾದ ಪ್ರಗತಿ ಇದೆ. ಶುಭದಿನ: 15. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.